ವಿ ರೈತ ಮಿತ್ರ



■ಪ್ರಸ್ತುತ ಬೇಸಿಗೆ ಆರಂಭವಾಗುತ್ತಿದ್ದು, ಕರಬೂಜ ಬೆಳೆ ಬಗ್ಗೆ ಮಾಹಿತಿ ನೀಡಿ.

| **ಪ್ರವೀಣ್** ಬೀದರ್

ಕರಬೂಜ ಸಿಹಿ ಹಾಗೂ ರುಚಿಯಾದ ಹಣ್ಣಾಗಿದ್ದು, ವಿಟಮಿನ್ ಎ ಮತ್ತು ಸಿ ಖನಿಜಗಳಿಂದ ಕೂಡಿದೆ. ಇದು ಮನುಷ್ಯನ ದೇಹಕ್ಕೆ ತಂಪು ನೀಡಿ, ಜೀರ್ಣಕ್ರಿಯೆಯಲ್ಲಿ ಸಹಕಾರಿಯಾಗಲಿದೆ. ಇದನ್ನು ಹೆಚ್ಚಿನ ಉಷ್ಣತೆ, ಒಣ ಹವೆಯಿರುವ ವಾತಾವರಣದಲ್ಲಿ ಬೆಳೆಯಬಹುದಾಗಿದೆ.

ಬಿತ್ತನೆ: ಪ್ರತಿ ಎಕರೆಗೆ 10 ಟನ್ ಕೊಟ್ಟಿಗೆ ಗೊಬ್ಬರ/ ಕಾಪೋಸ್ಟ್ ಜತೆಗೆ ಶಿಫಾರಸು ಮಾಡಿದ ಶೇ.50 ಸಾರಜನಕ (20 ಕಿ.ಗ್ರಾಂ), ರಂಜಕ (15 ಕಿ.ಗ್ರಾಂ) ಮತ್ತು ಪೋಟ್ಯಾಷ್ ಅನ್ನು (10 ಕಿ.ಗ್ರಾಂ) ಮಣ್ಣಿಗೆ ಸೇರಿಸುವುದು. ಬಿತ್ತನೆ ಮಾಡಲು ಜನವರಿ - ಫೆಬ್ರವರಿ ತಿಂಗಳು ಸೂಕ್ತ. 2.5-3 ಮೀ. ಅಂತರದ ಸಾಲುಗಳಲ್ಲಿ ಬೀಜದಿಂದ ಬೀಜಕ್ಕೆ 90 ಸೆಂ.ಮೀ. ಅಂತರದಲ್ಲಿ 34 ಬೀಜಗಳನ್ನು ಬಿತ್ತನೆ ಮಾಡಬೇಕು. ತದನಂತರ ಉಳಿದ ಶೇ.50 ಸಾರಜನಕ, ರಂಜಕ ಮತ್ತು ಪೋಟ್ಯಾಷ್ ಗೊಬ್ಬರವನ್ನು ಬಿತ್ತಿದ 4 ವಾರಗಳ ನಂತರ ಮಣ್ಣಿಗೆ ಸೇರಿಸುವುದು.

ತಳಿಗಳು: ಅರ್ಕಾ ಜೀತ್, ಪೂಸಾ ಶರಬತಿ, ಹರ ಮಧು, ಅರ್ಕಾಸಿರಿ ಇತ್ಯಾದಿ. ಕರಬೂಜ ಬಳ್ಳಿಗಳು ಎರಡರಿಂದ ನಾಲ್ಕು ಎಲೆಗಳ ಹಂತದಲ್ಲಿದ್ದಾಗ 250 ಪಿಪಿಎಂ ಇಥ್ರೇಲ್ ದ್ರಾವಣ ಸಿಂಪಡಿಸುವುದು. ಇದರಿಂದಾಗಿ ಬಳ್ಳಿಗಳು ವೇಗವಾಗಿ ಬೆಳೆದು ಹೆಚ್ಚಿನ ಪ್ರಮಾಣದ ಹೆಣ್ಣು ಹೂಗಳನ್ನು ಉತ್ಪಾದಿಸುತ್ತವೆ. ಪ್ರತಿ ಎಕರೆಗೆ 6-8 ಟನ್ ಇಳುವರಿ ಪಡೆಯಬಹುದಾಗಿದೆ.

| **ಡಾ. ಪ್ರಹ್ಲಾದ್ ಪಿ. ಭಟ್** ಸಹಾಯಕ ಪ್ರಾಧ್ಯಾಪಕರು, ಕೃಷಿ ವಿಸ್ತರಣೆ

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ

Vijayavani pg 09



ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ಭಾರತೀಯ ಸಂಘದ ವತಿಯಿಂದ ಕರ್ನಾಟಕ ಬೇಸಾಯ ಶಾಸ್ತ್ರ ವಿಜ್ಞಾನಿಗಳ ಸಮಾವೇಶವನ್ನು ಸಸ್ಯ ಆರೋಗ್ಯಗಳ ಕುರಿತಾದ ಒಂದು ದಿನದ ಕಾರ್ಯಾಗಾರವನ್ನು ಜಿಕೆವಿಕೆಯ ಕುಲಪತಿ ಡಾ.ಎಸ್.ವಿ.ಸುರೇಶ ಉದ್ಘಾಟಿಸಿದರು. ಈ ವೇಳೆ ಧಾರವಾಡ ಕೃಷಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಡಿ.ಪಿ.ಬಿರಾದರ್, ವಿಶ್ರಾಂತ ಕುಲಪತಿಗಳು, ಪಿ.ಡಿ.ಕೆ.ವಿ. ಅಕೋಲ ಡಾ.ವಿ.ಎಂ.ಭಾಲೆ, ಜಿಕೆವಿಕೆ ವ್ಯವಸ್ಥಾಪನಾ ಮಂಡಳಿ ಸದಸ್ಯರು ಡಾ.ಟಿ.ಕೆ ಪ್ರಭಾಕರ ಶೆಟ್ಟಿ ಸೇರಿದಂತೆ ಇತರರಿದ್ದರು.



ಫ್ಯಾಕ್ಟ್‌ಶೀಟ್‌ನಿಂದ ಬೇಳೆಕಾಳು ಹೊರಕ್ಕೆ
ಭಾರತದ ಕೃಷಿ ಕೋರಿಕೆ ಪುರಸ್ಕರಿಸಿದ ಅಮೆರಿಕ

ವಾಷಿಂಗ್ಟನ್: ಭಾರತ ಮತ್ತು ಅಮೆರಿಕ ನಡುವಿನ ಮಧ್ಯಂತರ ವ್ಯಾಪಾರ ಒಪ್ಪಂದದಲ್ಲಿ ಮಹತ್ವದ ಪರಿಷ್ಕರಣೆ ಏರ್ಪಟ್ಟಿದೆ. ಈ ಒಪ್ಪಂದದ ಮೂಲಕ ಭಾರತದ ಕೃಷಿ ಕ್ಷೇತ್ರವನ್ನು ಅಮೆರಿಕಕ್ಕೆ ಮಾರಲಾಗಿದೆ ಎಂಬ ಆರೋಪ ಕೇಳಿ ಬಂದ ಬೆನ್ನಲ್ಲೇ, ತಾನು ಬಿಡುಗಡೆ ಮಾಡಿದ್ದ ಫ್ಯಾಕ್ಟ್‌ಶೀಟ್ ಅನ್ನು ಅಮೆರಿಕ ಪರಿಷ್ಕರಿಸಿದೆ. ಬೇಳೆಕಾಳು ಮತ್ತು ಡಿಜಿಟಲ್ ಸೇವಾ ತೆರಿಗೆಯನ್ನು ಪರಿಷ್ಕೃತ ಆವೃತ್ತಿಯಲ್ಲಿ ಕೈಬಿಟ್ಟಿರುವುದು ಹೊಸ ಬೆಳವಣಿಗೆ. ಶ್ವೇತಭವನ ಈ ಮೊದಲು ಬಿಡುಗಡೆ ಮಾಡಿದ್ದ ಫ್ಯಾಕ್ಟ್‌ಶೀಟ್‌ನಲ್ಲಿ ಒಣಗಿದ ಡಿಸ್ಟಿಲರ್ಸ್ ಧಾನ್ಯಗಳು, ಕೆಂಪು ಜೋಳ, ಮರದಲ್ಲಿ ಬೆಳೆಯುವ ಬೀಜಗಳು, ತಾಜಾ ಮತ್ತು ಸಂಸ್ಕರಿಸಿದ ಹಣ್ಣುಗಳು, ಆಯ್ದ ಬೇಳೆಕಾಳುಗಳು, ಸೋಯಾಬೀನ್ ಎಣ್ಣೆ, ವೈನ್ ಮತ್ತು ಸ್ಪಿರಿಟ್ಸ್ ಮೇಲೆ ಭಾರತ ಸುಂಕ ತೆಗೆದುಹಾಕುತ್ತದೆ ಅಥವಾ ಕಡಿಮೆ ಮಾಡುತ್ತದೆ ಎಂದು ತಿಳಿಸಲಾಗಿತ್ತು. ಆದರೆ ಪರಿಷ್ಕೃತ ಫ್ಯಾಕ್ಟ್ ಶೀಟ್‌ನಲ್ಲಿ ಪ್ರಸ್ತಾವಿತ ಸುಂಕ ಕಡಿತದ ಅಡಿಯಲ್ಲಿ ಬರುವ ಉತ್ಪನ್ನಗಳ ಪಟ್ಟಿಯಿಂದ ಬೇಳೆಕಾಳುಗಳನ್ನು ಸಂಪೂರ್ಣವಾಗಿ ತೆಗೆದುಹಾಕಿದೆ. ◐ ಪುಟ 6A

■ ಡಿಜಿಟಲ್ ಸೇವಾ ತೆರಿಗೆಗೂ ಬಿತ್ತು ಬ್ರೇಕ್



Vijayavani pg 01

ಪಿಒಕೆ ನಕ್ಷೆ ಡಿಲೀಟ್

ಭಾರತ ಮತ್ತು ಅಮೆರಿಕ ವ್ಯಾಪಾರ ಒಪ್ಪಂದ ಘೋಷಣೆ ಹಿನ್ನೆಲೆಯಲ್ಲಿ ಅಮೆರಿಕ ವ್ಯಾಪಾರ ಪ್ರತಿನಿಧಿ ಕಚೇರಿ ಪಾಕಿಸ್ತಾನ ಆಕ್ರಮಿತ ಕಾಶ್ಮೀರ (ಪಿಒಕೆ) ಮತ್ತು ಆಕ್ಸಾಯ್ ಚಿನ್ ಪ್ರದೇಶವನ್ನು ಭಾರತದ ಭೂಭಾಗವೆಂದು ತೋರಿಸುವ ನಕ್ಷೆಯನ್ನು ಒಳಗೊಂಡಿದ್ದ ಪೋಸ್ಟ್ ಮಾಡಿತ್ತು. ಇದೀಗ ಪೋಸ್ಟ್ ಅನ್ನು ಡಿಲೀಟ್ ಮಾಡಲಾಗಿದೆ. ಪಾಕ್ ಆಕ್ರಮಿತ ಕಾಶ್ಮೀರ ಮತ್ತು ಅಕ್ಸಯ್ ಚಿನ್ ಪ್ರದೇಶ ಭಾರತದ ಅವಿಭಾಜ್ಯ ಪ್ರದೇಶ ಎಂದು ಭಾರತ ಪ್ರತಿಪಾದಿಸುತ್ತಾ ಬಂದಿದ್ದು, ಎರಡೂ ಪ್ರದೇಶಗಳನ್ನು ಒಳಗೊಂಡ ನಕ್ಷೆಯನ್ನು ಬಿಡುಗಡೆ ಮಾಡಿದೆ.

ಭಾರತದ ಕೃಷಿ ಕೋರಿಕೆ ಪುರಸ್ಕರಿಸಿದ ಅಮೆರಿಕ

ಮೊದಲನೇ ಪುಟದಿಂದ...

ಇದರೊಂದಿಗೆ ಭಾರತ 500 ಬಿಲಿಯನ್ ಡಾಲರ್‌ಗೂ (44 ಲಕ್ಷ ಕೋಟಿ ರೂ.) ಹೆಚ್ಚಿನ ಅಮೆರಿಕ ಉತ್ಪನ್ನ ಖರೀದಿಸಲು ಬದ್ಧವಾಗಿದೆ ಎಂದು ತಿಳಿಸಲಾಗಿತ್ತು. ಪರಿಷ್ಕೃತ ಆವೃತ್ತಿಯಲ್ಲಿ ಬದ್ಧತೆ ಬದಲು ಉದ್ದೇಶಿಸಿದೆ ಎಂದು ಬದಲಿಸಲಾಗಿದೆ.

ಪರಿಷ್ಕೃತ ಫ್ಯಾಕ್ಟ್‌ಶೀಟ್ ನಲ್ಲಿ ಭಾರತ ಡಿಜಿಟಲ್ ಸೇವಾ ತೆರಿಗೆಗಳನ್ನು ತೆಗೆದುಹಾಕುವ ಉಲ್ಲೇಖವನ್ನೂ ಕೈಬಿಟ್ಟಿದೆ. ಹಿಂದಿನ ಆವೃತ್ತಿಯಲ್ಲಿ ಡಿಜಿಟಲ್ ವ್ಯಾಪಾರಗಳಿಗೆ ಇರುವ ಅಡೆತಡೆಗಳನ್ನು ಪರಿಹರಿಸಲು ಭಾರತ ದ್ವಿಪಕ್ಷೀಯ ಡಿಜಿಟಲ್ ವ್ಯಾಪಾರ ನಿಯಮಗಳ ಕುರಿತು ಮಾತುಕತೆ ನಡೆಸಲು ಬದ್ಧವಾಗಿದೆ ಎಂದು ತಿಳಿಸಿತ್ತು. ಈಗ ಡಿಜಿಟಲ್ ಸೇವಾ ತೆರಿಗೆಯನ್ನು ಉಲ್ಲೇಖಿಸದೆ ಕೇವಲ ವ್ಯಾಪಾರ ನಿಯಮಗಳ ಕುರಿತು ಮಾತುಕತೆ ನಡೆಸಲಾಗುವುದು ಎಂದು ತಿಳಿಸಿದೆ.

ಆತಂಕವೇನಿತ್ತು?: ಅಮೆರಿಕ ತನ್ನ ಫ್ಯಾಕ್ಟ್‌ಶೀಟ್ ನಲ್ಲಿ ಬೇಳೆಕಾಳುಗಳನ್ನು ಸೇರಿಸಿತ್ತು, ಯಾವೆಲ್ಲಾ ಬೇಳೆಕಾಳುಗಳು ಫ್ಯಾಕ್ಟ್‌ಶೀಟ್ ನಲ್ಲಿ ಸೇರಿವೆ ಎಂಬ ಕುರಿತು ಸ್ಪಷ್ಟತೆ ಇರಲಿಲ್ಲ. ಈ ಹಿನ್ನೆಲೆಯಲ್ಲಿ ರೈತರು ಮತ್ತು ರೈತ ಸಂಘಟನೆಗಳು ಕಳವಳ ವ್ಯಕ್ತಪಡಿಸಿದ್ದವು. ಅಮೆರಿಕ ಹಸಿರು ಬೇಳೆಗಳನ್ನು ಹೆಚ್ಚಾಗಿ ಉತ್ಪಾದಿಸುತ್ತದೆ. ಇವು ಇತರ ದೇಶಗಳಿಂದ ಆಮದು ಮಾಡಿಕೊಳ್ಳುವ ಬೇಳೆಗಳಿಗಿಂತ ಹೆಚ್ಚಿನ ಬೆಲೆ ಹೊಂದಿದೆ. ಭಾರತ ಆಮದು ಮಾಡಿಕೊಳ್ಳುವ ಒಟ್ಟು ಬೇಳೆಕಾಳುಗಳಲ್ಲಿ ಅಮೆರಿಕದ ಪಾಲು ಶೇ. 8-12 ರಷ್ಟಿದ್ದು ಇದರ ಮೌಲ್ಯ 74-76 ಮಿಲಿಯನ್ ಡಾಲರ್ (689 ಕೋಟಿ ರೂ.) ಇದೆ.

ಸಂಯುಕ್ತ ಕರ್ನಾಟಕ
ಗುರುವಾರ 12 ಫೆಬ್ರವರಿ 2026

ಕೃಷಿ ಉತ್ಪಾದಕತೆ ಹೆಚ್ಚಳಕ್ಕಾಗಿ ತಂತ್ರಜ್ಞಾನ ಅತಿ ಮುಖ್ಯ: ಶೀಲವಂತರ್

ಸಂ.ಕ.ಸಮಾಚಾರ, ಬೆಂಗಳೂರು

ಸಮಾಜದಲ್ಲಿ ಕೃಷಿ ಉತ್ಪಾದಕತೆ ಹೆಚ್ಚಿಸುವಲ್ಲಿ ತಂತ್ರಜ್ಞಾನಗಳು, ಲಾಭದಾಯಕ ಕೃಷಿ ಪದ್ಧತಿಗಳು ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ ಎಂದು ಕೃಷಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಎಂ.ಎನ್.ಶೀಲವಂತರ್ ತಿಳಿಸಿದರು.

ನಗರದ ಜಿಕೆವಿಕೆಯಲ್ಲಿ ಕೃಷಿ ವಿಶ್ವವಿದ್ಯಾಲಯ ಮತ್ತು ಭಾರತೀಯ ಸಂಘದ ವತಿಯಿಂದ ನಡೆದ ಕರ್ನಾಟಕ ಬೇಸಾಯ ಶಾಸ್ತ್ರ ವಿಜ್ಞಾನಿಗಳ ಸಮಾವೇಶವನ್ನು ಹಾಗೂ ಬೇಸಾಯ ಶಾಸ್ತ್ರದಿಂದ ಹೆಚ್ಚಿನ ಉತ್ಪಾದಕತೆ, ಲಾಭದಾಯಕತೆ, ಮತ್ತು ಸಸ್ಯ ಆರೋಗ್ಯಗಳ ಕುರಿತಾದ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು ಹವಾಮಾನ ಬದಲಾವಣೆ, ಮಣ್ಣಿನ ಆರೋಗ್ಯ, ನೀರಿನ ನಿರ್ವಹಣೆ, ಬೆಳೆ ವೈವಿದ್ಯೀಕರಣ ಮತ್ತು ನವೀನ ಕೃಷಿ ತಂತ್ರಜ್ಞಾನಗಳ ಬಗ್ಗೆ ಮಾಹಿತಿ ನೀಡಿದರು.

ಇದೇ ವೇಳೆ ಬೇಸಾಯ ಶಾಸ್ತ್ರದ ವಿಭಾಗದ ದಿಗ್ಗಜರು ಹಾಗೂ ಅಂತಾರಾಷ್ಟ್ರೀಯ ವಿಜ್ಞಾನಿಗಳಾದ ಡಾ. ಅರಕೇರಿ, ಡಾ. ಎಸ್.ವಿ.ಪಾಟೀಲ್ ಹಾಗೂ ಡಾ. ಕೆ. ಕೃಷ್ಣಮೂರ್ತಿ ಅವರ ಕೊಡುಗೆಗಳನ್ನು ಸ್ಮರಿಸಿದರು. ಕೃಷಿ ವಿವಿ ಕುಲಪತಿ ಡಾ.ಎಸ್.ವಿ.ಸುರೇಶ ಮಾತನಾಡಿ, ಇಂದಿನ ಜಾಗತಿಕ ಕೃಷಿ ಪರಿಸ್ಥಿತಿಯಲ್ಲಿ ಬೇಸಾಯ ಶಾಸ್ತ್ರದ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಹೆಚ್ಚುತ್ತಿರುವ ಜನಸಂಖ್ಯೆ, ಹವಾಮಾನ ಬದಲಾವಣೆ ಮತ್ತು ಮಣ್ಣಿನ ಆರೋಗ್ಯ ಕುಸಿತದ ಬಗ್ಗೆ ಸಂಶೋಧನೆಗಳು ಕೃಷಿಯ ಭವಿಷ್ಯವನ್ನು ರೂಪಿಸುತ್ತಿವೆ. ರೈತರಿಗೆ ಆರ್ಥಿಕ ಭದ್ರತೆ ನೀಡುವುದರ ಜೊತೆಗೆ ಪ್ರಕೃತಿಯೊಂದಿಗೆ ಸಮನ್ವಯ ಸಾಧಿಸಲು ದೀರ್ಘಕಾಲಿಕ ಕೃಷಿ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸುವುದು ಅಗತ್ಯವಾಗಿದೆ ಎಂದರು.ಕುಲಪತಿ ಡಾ.ಎಂ.ಹನುಮಂತಪ್ಪ, ವಿಶ್ರಾಂತ ಕುಲಪತಿ ಡಾ.ಡಿ.ಪಿ.ಬಿರಾದರ್, ಪಿ.ಡಿ.ಕೆ.ವಿ. ಅಕೋಲ, ಡಾ.ಟಿ.ಕೆ ಪ್ರಭಾಕರ ಶೆಟ್ಟಿ ಹಾಜರಿದ್ದರು.

ವರ್ಣಗಳೇ ಮಲೆನಾಡು ಗಿಡ್ಡದ ವೈಶಿಷ್ಟ್ಯ | 6 ವರ್ಷಗಳ ಸಂಶೋಧನೆ ಫಲ

ಹುಲಿ ಮೈಬಣ್ಣದ ಗೋವು ಸಂವರ್ಧನೆ!

■ ಪವನ್ ಆಚಾರ್ಯ ನೀರ್ಚಾಲು ಬೆಂಗಳೂರು

ಕಪಿಲ ವರ್ಣದ ಮಲೆನಾಡು ಗಿಡ್ಡ ತಳಿಯಲ್ಲೇ ಮೈ ಮೇಲೆ ಕಪ್ಪು ಪಟ್ಟಿಗಳ ಹೊದ್ದು ಜನಿಸುವ ವ್ಯಾಘ್ರವರ್ಣದ ಕಪಿಲ ಗೋವುಗಳು ತುಂಬಾ ವಿರಳ ಹಾಗೂ ಅಳಿವಿನ ಅಂಚಿನಲ್ಲಿರುವ ತಳಿಯೂ ಹೌದು. ಹಾಗಾಗಿ ಮಲೆನಾಡು ಗಿಡ್ಡ ತಳಿಯ ಅಪ್ಪಟ ದೇಸಿ ಗೋವುಗಳ ಸಂವರ್ಧನೆಗೆ ಕಠಾವಳಿ ಭಾಗದಲ್ಲಿ ವಿವಿಧ ಪ್ರಯೋಗ ನಡೆಯುತ್ತಿದ್ದು, ಇದೀಗ ಸಂಶೋಧನೆಗೆ ಫಲ ಸಿಕ್ಕಿದೆ.

ದಕ್ಷಿಣಕನ್ನಡ ಜಿಲ್ಲೆ ಬೆಳ್ಳಾರೆಯ ಪ್ರವೀಣ್ ಎಂಬ ಗೋಪಾಲಕರ ಗೋಶಾಲೆಯಲ್ಲಿ ಒಂದು ಕಪಿಲ ಹಸುವಿಗೆ ಜನಿಸಿದ ಹೋರಿ ಕರುವು ಕಪ್ಪು ಪಟ್ಟಿಗಳಿಂದ ಕೂಡಿತ್ತು. ಅದೇ ಕರುವನ್ನು ಸಾಕಿ ಬೆಳೆಸಿದ್ದು. ಇದೀಗ ಆ ಹೋರಿಯಿಂದ ಹುಟ್ಟಿದ ಕರುವಿಗೂ ಅದೇ ರೀತಿಯ ಬಣ್ಣ ಬಂದಿರುವುದು ಅಚ್ಚರಿ ಮೂಡಿಸಿದೆ. ಆದರೆ, ಈ ವಿಶಿಷ್ಟ ತಳಿಯ ಸಂವರ್ಧನೆ, ಬಣ್ಣದಲ್ಲಿ ಫಲಿತಾಂಶ ಕಾಣಲು ಸತತ 6 ವರ್ಷಗಳ ಸಂಶೋಧನೆ ಹಾಗೂ ವಿಶೇಷ ತಳಿ ಸಂವರ್ಧನೆ ಹಿಂದೆ ಗೋಪಾಲಕರ ಪರಿಶ್ರಮ ಬಹಳಷ್ಟಿದೆ.

ವ್ಯಾಘ್ರವರ್ಣ ಹಿನ್ನೆಲೆ ಏನು?: ಮಲೆನಾಡು ಗಿಡ್ಡಗಳು ಹಿಂದೆ ದುಗ್ಗಮವಾದ ಕಾಡು ಬೆಟ್ಟಗಳ ಹಾದಿಯಲ್ಲಿ ಮೇಯಲು ಅಥವಾ ಅಲೆದಾಡುವ ಸಂದರ್ಭ ಕಾಡುಪ್ರಾಣಿಗಳ ಹಾವಳಿಗೆ ತುತ್ತಾಗುತ್ತಿದ್ದವು. ಹಿಂದಿನ ಕಾಲದಲ್ಲಿ ಹುಲಿ ಬಣ್ಣದ ಗೋವು ಅಥವಾ ಹೋರಿಗಳಿದ್ದರೆ ಅದನ್ನು ಗೋಮಂದೆಯ ರಕ್ಷಣೆ ಸಲುವಾಗಿ ಮುಂದೆ ಕಳುಹಿಸಲಾಗುತ್ತಿತ್ತು. ಅಂದರೆ, ಕ್ರೂರ ಪ್ರಾಣಿಗಳು ಇತರ ಹಸುಗಳ ಮೇಲೆ ಆಕ್ರಮಣಕ್ಕೆ ಬಂದಾಗ ವ್ಯಾಘ್ರವರ್ಣದ ಹಸು ಅಥವಾ ಹೋರಿಯನ್ನು ಕಂಡು ಭಯಗೊಂಡು ವಾಪಸಾಗುತ್ತಿದ್ದವು. ಇಂತಹ ಅತ್ಯಂತ ವಿರಳ ಹಾಗೂ ಅಳಿವಿನಂಚಿನಲ್ಲಿದ್ದ, ಈ ಬಣ್ಣವನ್ನು ಮತ್ತೆ ಪ್ರವರ್ಧಮಾನಕ್ಕೆ ತರಲು ಪ್ರವೀಣ್ ಬೆಳ್ಳಾರೆ ವ್ಯಾಘ್ರವರ್ಣದ ಹೋರಿಯ ಹುಡುಕಾಟದಲ್ಲಿದ್ದರು. ಇದೀಗ ವ್ಯಾಘ್ರವರ್ಣದ ಮಲೆನಾಡ ಗಿಡ್ಡ ತಳಿಯ ಗೋ ಸಂವರ್ಧನೆ ಯಶಸ್ವಿಯಾಗಿದೆ. ಗೋವುಗಳನ್ನು ವಿವಿಧ ವರ್ಣಗಳ ಆಧಾರದಲ್ಲಿ ವರ್ಗೀಕರಣ ಮಾಡಿ ಉಲ್ಲೇಖಿಸಿರುವುದನ್ನು ಮಹಾಭಾರತ, ಗರುಡಪುರಾಣ ಇತ್ಯಾದಿ ಗ್ರಂಥಗಳಲ್ಲೂ ಕಾಣಬಹುದು. ಮುಖ್ಯವಾಗಿ ಕಪಿಲ, ಶ್ವೇತ ಕಪಿಲ, ಗೌರ ಪಿಂಗಲ, ಗಲಪಿಂಗಲ, ಭಭ್ರುವರ್ಣ, ರಕ್ತಪಿಂಗಲ, ನೀಲ, ಮಹಾನೀಲ ಸೇರಿ 10 ಬಣ್ಣದ ತಳಿಗಳಿವೆ. ಈ ಪೈಕಿ ವ್ಯಾಘ್ರವರ್ಣ ಬಹಳ ಅಪರೂಪ ಹಾಗೂ ವಿಶಿಷ್ಟ ಎನಿಸಿಕೊಂಡಿದೆ.

ಬಣ್ಣವೇ ವಿಶೇಷ: ಕಪಿಲ ಎಂಬ ವರ್ಣವನ್ನೇ ಹಲವು ವಿಧವಾಗಿ ವರ್ಗೀಕರಿಸಲಾಗಿದೆ. ಪೂರ್ಣ ಶ್ವೇತವರ್ಣದ ಹಸುವಿಗೆ ಮೂಗಿನ ತುದಿ ತಿಳಿಗುಲಾಬಿ ಹಾಗೂ ಗೊರಸು ಕೆನೆ ಬಣ್ಣ, ಬಾಲದ ತುದಿ ಬಂಗಾರದ ವರ್ಣ, ಗಾಜು ಕಣ್ಣು, ರೆಪ್ಪೆಯ ಕೂದಲು ಸಹಿತ ಬಿಳಿಯಾಗಿ ಇರುವ ಹಸುವನ್ನು ಶ್ವೇತ ಕಪಿಲ ಎಂದು ಗುರುತಿಸಲಾಗುತ್ತದೆ. ಕೆಲವೊಮ್ಮೆ ಪ್ರತಿತ ಈ ಗುಣಲಕ್ಷಣ ಇಲ್ಲದಿದ್ದರೂ ಆ ಹಸುವಿನಿಂದ ಪೂರ್ಣ ಗುಣಲಕ್ಷಣ ಇರುವ ಕರು ಜನಿಸುವ ಸಾಧ್ಯತೆಯೂ ಇದೆ. ಸಂವರ್ಧನೆಗಾಗಿ ಆಯ್ದ ವ್ಯಾಘ್ರವರ್ಣದ ಮಲೆನಾಡು ಗಿಡ್ಡ ಹೋರಿಯಲ್ಲಿ ಪೂರ್ಣ ಗುಣಲಕ್ಷಣಗಳು ಕಾಣಿಸಿಕೊಳ್ಳದಿದ್ದರೂ ಕರುವು ಉತ್ತಮ ಗುಣಲಕ್ಷಣಗಳಿಂದ ಹುಟ್ಟಿರುವುದು ಇದಕ್ಕೆ ಸಾಕ್ಷಿ. ಇಂತಹ ಹಲವು ವರ್ಣದ ಗೋವುಗಳು ಜನಿಸುವುದೇ ಮಲೆನಾಡು ಗಿಡ್ಡ ತಳಿಯ ವಿಶೇಷತೆ.



ಮಲೆನಾಡ ಗಿಡ್ಡ



ಹುಲಿಯ ಮೈಬಣ್ಣವನ್ನು ಹೊಂದಿರುವ ಗೋವು ತುಂಬಾ ಆಕರ್ಷಕವಾಗಿ ಕಾಣಿಸುತ್ತದೆ. ಹುಲಿಯ ರೀತಿಯ ಕಪ್ಪು ಪಟ್ಟಿಗಳು ಅದರ ಮೈಮೇಲೆ ಕಾಣಬಹುದು. ಇದೀಗ ಸ್ನೇಹಿತರ, ಗೋಪ್ರೇಮಿಗಳ ಸಹಕಾರದೊಂದಿಗೆ ಈ ವಿಶೇಷ ತಳಿಯ ಸಂವರ್ಧನೆಯಲ್ಲಿ ನಿರತನಾಗಿದ್ದೇನೆ. ಮಲೆನಾಡು ಗಿಡ್ಡಗಳ ಗುಣಮಟ್ಟದ ಸಂವರ್ಧನೆಯನ್ನು ಸರ್ಕಾರ ಮುತುವರ್ಜಿಯಿಂದ ಮಾಡಬೇಕು.

| ಪ್ರವೀಣ್ ಬೆಳ್ಳಾರೆ ಗೋಪಾಲಕ

ಕಪಿಲ ಗೋವು ಸಂವರ್ಧನೆ ಅಗತ್ಯ

ಗಿರ್, ಹಳ್ಳಿಕಾರ್, ಖಿಲಾರಿ ಮೊದಲಾದ ದೇಸಿ ಹಸುಗಳಿಗೆ ಏಕರೂಪದ ಲಕ್ಷಣವೇ ಹೆಚ್ಚಾಗಿರುತ್ತದೆ. ಆದರೆ ಮಲೆನಾಡು ಗಿಡ್ಡ ಗೋವುಗಳು ಪ್ರತಿಯೊಂದೂ ವರ್ಣ, ಕೊಂಬಿನ ರಚನೆ, ಗುಣ, ಸ್ವಭಾವಗಳು ವೈವಿಧ್ಯಪೂರ್ಣವಾಗಿರುತ್ತದೆ. ಅದರಲ್ಲೂ ಕಪಿಲ ವರ್ಣ ಹಾಗೂ ಇತರ ಲಕ್ಷಣಗಳ ಗೋವುಗಳು ಜನಿಸುವುದೂ ಅಪರೂಪ. ಅವುಗಳಲ್ಲೂ ಶ್ವೇತ ಕಪಿಲವಂತೂ ಅತ್ಯಂತ ಅಪರೂಪ. ಆದ್ದರಿಂದ ಕಪಿಲ ಗೋವು ಹಾಗೂ ಶ್ವೇತ ಕಪಿಲಗಳನ್ನು ಸಂವರ್ಧನೆ ಮಾಡುವ ಅನಿವಾರ್ಯತೆ ಇದೆ. ಭಾರತೀಯ ಸಂಸ್ಕೃತಿಯಲ್ಲಿ ಪವಿತ್ರತೆಯ ಪ್ರತೀಕವಾಗಿ ಕಪಿಲ ಗೋವುಗಳು ಶಾಂತ ಸ್ವಭಾವ ಮತ್ತು ಸಾತ್ವಿಕ ಗುಣಗಳಿಂದ ಪ್ರಸಿದ್ಧವಾಗಿವೆ. ವೇದಪುರಾಣಗಳಲ್ಲಿ ಕಪಿಲ ಗೋವಿಗೆ ಮಹತ್ವದ ಸ್ಥಾನವಿದ್ದು, ದೇವತಾ ಕೃಪೆಯನ್ನು ಹೊತ್ತಿರುವ ತಾಯಿ ರೂಪವಾಗಿ ಗೌರವಿಸಲಾಗುತ್ತದೆ. ಕಪಿಲ ಗೋವಿನ ಹಾಲು, ಮೊಸರು, ತುಪ್ಪ ಔಷಧೀಯ ಗುಣಗಳಿಂದ ಕೂಡಿದ್ದು, ಆಯುರ್ವೇದದಲ್ಲಿ ಅಮೂಲ್ಯವೆಂದು ಪರಿಗಣಿಸಲಾಗಿದೆ. ಕಪಿಲ ಗೋವು ಮನೆಗೆ ಶುಭ, ಶಾಂತಿ ಮತ್ತು ಐಶ್ವರ್ಯ ತರುತ್ತದೆ ಎಂಬ ನಂಬಿಕೆಯೂ ಇದೆ.

Vijajavani Pg 09

ಬೇಯದ ಅಮೆರಿಕದ ಬೇಳೆ!



- ಮಧ್ಯಂತರ ವ್ಯಾಪಾರ ಒಪ್ಪಂದದ ಫ್ಯಾಕ್ಟ್ ಶೀಟ್‌ನಲ್ಲಿ ತಿದ್ದುಪಡಿ
- ಕೃಷಿ ಉತ್ಪನ್ನಗಳ ವಿಭಾಗದಲ್ಲಿ ಭಾರತದ ಬದ್ಧತೆಗೆ ಜಯ

ನ್ಯೂಯಾರ್ಕ್/ವಾಷಿಂಗ್ಟನ್: ಭಾರತ ಮತ್ತು ಅಮೆರಿಕ ನಡುವೆ ಮಧ್ಯಂತರ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದಂತೆ ಈ ಹಿಂದೆ ಬಿಡುಗಡೆ ಮಾಡಿದ್ದ 'ಫ್ಯಾಕ್ಟ್ ಶೀಟ್' ಅನ್ನು ಶ್ವೇತ ಭವನ ಪರಿಷ್ಕರಿಸಿದೆ.

ಭಾರತವು ಅಮೆರಿಕದಿಂದ 500 ಶತಕೋಟಿ ಡಾಲರ್ ಮೌಲ್ಯದ ಇಂಧನ, ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ, ಕೃಷಿ, ಕಲ್ಲಿದ್ದಲು ಮತ್ತು ಇತರೆ ಉತ್ಪನ್ನಗಳನ್ನು ಖರೀದಿಸಲು 'ಬದ್ಧವಾಗಿದೆ' ಎಂದು ಹೇಳಲಾಗಿತ್ತು. ಅದನ್ನೀಗ 'ಖರೀದಿಸಲು ಉದ್ದೇಶಿಸಲಾಗಿದೆ' ಎಂದು ಮಾರ್ಪಡಿಸಲಾಗಿದೆ. ಭಾರತ ಖರೀದಿಸುವ ಉತ್ಪನ್ನಗಳ ಪಟ್ಟಿಯಿಂದ ಕೃಷಿಯನ್ನು ತೆಗೆದು ಹಾಕಲಾಗಿದೆ.

''ಭಾರತ ಅಮೆರಿಕದಿಂದ ಆಮದು ಮಾಡಿಕೊಳ್ಳುವ ಕೈಗಾರಿಕಾ ಉತ್ಪನ್ನಗಳು, ಕೃಷಿ ಧಾನ್ಯಗಳ ಹೊಟ್ಟು, ಕೆಂಪು ಜೋಳ, ಬಾದಾಮಿ, ಗೋಡಂಬಿ, ತಾಜಾ ಹಾಗೂ ಸಂಸ್ಕರಿಸಿದ ಹಣ್ಣುಗಳು, ಸೋಯಾಬೀನ್ ಎಣ್ಣೆ, ವೈನ್ ಮತ್ತು ಸ್ಪಿರಿಟ್ ಹಾಗೂ ಕೆಲವೊಂದು 'ಬೇಳೆ ಕಾಳುಗಳು' ಸೇರಿದಂತೆ ವಿವಿಧ ವಸ್ತುಗಳ ಮೇಲಿನ ಸುಂಕವನ್ನು ತೆಗೆದು ಹಾಕಲಿದೆ ಅಥವಾ ಕಡಿಮೆ ಮಾಡಲಿದೆ,'' ಎಂದು ಈ ಮುನ್ನ ಬಿಡುಗಡೆ ಮಾಡಿದ್ದ ಫ್ಯಾಕ್ಟ್ ಶೀಟ್‌ನಲ್ಲಿ ಹೇಳಲಾಗಿತ್ತು.

ಇದು ಭಾರತದ ಕೃಷಿ ಕ್ಷೇತ್ರದ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಇದ್ದಿದ್ದರಿಂದ ತೀವ್ರ ಆಕ್ರೋಶ ವ್ಯಕ್ತವಾಗಿತ್ತು. ಪ್ರಾಯಶಃ ಇದನ್ನು ಭಾರತ ಅಮೆರಿಕಕ್ಕೆ ಮನವರಿಕೆ ಮಾಡಿಕೊಟ್ಟ ಹಿನ್ನೆಲೆಯಲ್ಲಿ, ಪರಿಷ್ಕೃತ 'ಫ್ಯಾಕ್ಟ್ ಶೀಟ್'ಅನ್ನು ಶ್ವೇತಭವನ ಬಿಡುಗಡೆಗೊಳಿಸಿದೆ. ಇದರಲ್ಲಿ 'ಕೆಲವೊಂದು ಬೇಳೆ ಕಾಳುಗಳು' ಎಂಬ ಪದವನ್ನು ಕೈ ಬಿಡಲಾಗಿದೆ.

'ಡಿಜಿಟಲ್ ಸರ್ವೀಸಸ್ ಟ್ಯಾಕ್ಸ್ ಉಲ್ಲೇಖ: ''ಭಾರತ ತನ್ನ ಡಿಜಿಟಲ್ ಸರ್ವಿಸಸ್ ತೆರಿಗೆಗಳನ್ನು ಕೈಬಿಡಲಿದೆ. ದ್ವಿಪಕ್ಷೀಯ ವಿದ್ಯುನ್ಮಾನ ವ್ಯಾಪಾರ ನಿಯಮಗಳನ್ನು ರೂಪಿಸಲು ಅಥವಾ ಇದರಲ್ಲಿರುವ ಅಡೆತಡೆಗಳ ಕುರಿತು ಸಂಧಾನಕ್ಕೆ ಭಾರತ ಬದ್ಧವಾಗಿದೆ,'' ಎಂದು ಹಳೆಯ ದಾಖಲೆಯಲ್ಲಿ ಹೇಳಲಾಗಿತ್ತು. ಈಗ ''ಭಾರತ ತನ್ನ ಡಿಜಿಟಲ್ ಸರ್ವಿಸಸ್ ತೆರಿಗೆಗಳನ್ನು ತೆಗೆದುಹಾಕಲಿದೆ,'' ಎಂಬುದನ್ನು ಎಲ್ಲೂ ಉಲ್ಲೇಖಿಸಿಲ್ಲ.

''ಮಧ್ಯಂತರ ಒಪ್ಪಂದದ ಕುರಿತು ಜಂಟಿ ಹೇಳಿಕೆ ಹೊರಬಿದ್ದಿದೆ. ಮಧ್ಯಂತರ ಒಪ್ಪಂದ ಎಂಬುದು ಅಂತಿಮವಲ್ಲ; ಉಭಯ ದೇಶಗಳು ಇದರಲ್ಲಿ ಹಲವು ಬದಲಾವಣೆಗಳು ಮಾಡುವ ಸಾಧ್ಯತೆ ಇದ್ದೇ ಇರುತ್ತದೆ. ಈ ಮೂಲಭೂತ ನಿಯಮವನ್ನು ಆಧರಿಸಿ ಈಗ ಒಂದಿಷ್ಟು ತಿದ್ದುಪಡಿ ಮಾಡಲಾಗಿದೆ. ಇದೊಂದು ಪ್ರಕ್ರಿಯೆ. ಅಂತಿಮ. ಯಾವ ಬದಲಾವಣೆಯೂ ಇಲ್ಲ ಎಂದು ಭಾವಿಸಲು ಆಗುವುದಿಲ್ಲ ಎಂದು ವಿದೇಶಿ ವ್ಯಾಪಾರ ವಲಯದ ತಜ್ಞರು ಹೇಳಿದ್ದಾರೆ.

V-karanaataka Pg 09

ರೈತ ಕರೆ ಕೇಂದ್ರಕ್ಕೆ ದೂರಿನ ಸುರಿಮಳೆ

Prajavani Pg 10

ಪಿಎಂ ಕಿಸಾನ್, ಬೆಳೆ ಸಮೀಕ್ಷೆ ತೊಡಕುಗಳ ಪರಿಹಾರಕ್ಕಾಗಿ 2.41 ಲಕ್ಷ ಕರೆಗಳು

● ಖಲೀಲಅಹ್ಮದ ಶೇಖ

ಬೆಂಗಳೂರು: 'ಪಿಎಂ-ಕಿಸಾನ್ ಯೋಜನೆಯಡಿ ನೋಂದಣಿ ಮಾಡಿಕೊಳ್ಳುವುದು ಹೇಗೆ? ಫಲಾನುಭವಿಗಳ ಪಟ್ಟಿಯಲ್ಲಿ ನಮ್ಮ ಹೆಸರಿದೆ, ಆದರೆ ನನ್ನ ಖಾತೆಗೆ ಹಣ ಜಮೆ ಆಗುತ್ತಿಲ್ಲ? ಬೆಳೆ ಸಮೀಕ್ಷೆ ಮಾಡುವಾಗ ಸರ್ವರ್ ಹಾಗೂ ನೆಟ್‌ವರ್ಕ್ ಸಮಸ್ಯೆ ಆಗುತ್ತಿದೆ...'

ಇದು ರಾಜ್ಯದ ಅನ್ನದಾತರ ಅಳಲುಗಳು. ಇಂತಹ ಸಮಸ್ಯೆಗಳ ಕುರಿತು ನಿತ್ಯ ನೂರಾರು ದೂರುಗಳು 'ರೈತ ಕರೆ ಕೇಂದ್ರ'ಕ್ಕೆ ಬರುತ್ತಿವೆ.

ರೈತರಿಗೆ ಮಾಹಿತಿ, ಸಲಹೆ, ಮಾರ್ಗದರ್ಶನ ನೀಡುವ ಉದ್ದೇಶದಿಂದ ಕೃಷಿ ಇಲಾಖೆ 2023ರ ಆಗಸ್ಟ್‌ನಲ್ಲಿ ಏಕೀಕೃತ ಶುಲ್ಕ ರಹಿತ ದೂರವಾಣಿ ಸಂಖ್ಯೆಯನ್ನಾಗಿ (18004253553) ಪರಿವರ್ತಿಸಿ (ಇಂಟಿಗ್ರೇಟೆಡ್ ವಾಯ್ಸ್ ರೆಸ್ಪಾನ್ಸ್ ಸಿಸ್ಟಂ-ಐವಿಆರ್‌ಎಸ್) ರೈತ ಕರೆ ಕೇಂದ್ರಕ್ಕೆ ಚಾಲನೆ ನೀಡಿತ್ತು.

ಈ ಸಹಾಯವಾಣಿಗೆ ಕರೆ ಮಾಡುವ ಬಹುತೇಕ ರೈತರು ಪಿಎಂ-ಕಿಸಾನ್ ಯೋಜನೆ ಹಾಗೂ ಬೆಳೆ ಸಮೀಕ್ಷೆಗೆ ಸಂಬಂಧಿಸಿದ ಮಾಹಿತಿ ಕೇಳುತ್ತಿದ್ದಾರೆ. 2023ರ ಆಗಸ್ಟ್‌ನಿಂದ 2026ರ ಫೆ.3ರ ವರೆಗೆ ಬಂದ ಒಟ್ಟು 2,89,552 ಕರೆಗಳ ಪೈಕಿ, 2,41,151 ಕರೆಗಳು ಬೆಳೆ ಸಮೀಕ್ಷೆ, ಪಿಎಂ-ಕಿಸಾನ್‌ಗೆ ಸಂಬಂಧಿಸಿದ್ದಾಗಿವೆ.

'ಪಿಎಂ ಕಿಸಾನ್ ಯೋಜನೆಯಡಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೇಂದ್ರ ಸರ್ಕಾರ ಪ್ರತಿವರ್ಷ ₹6 ಸಾವಿರ ಆರ್ಥಿಕ ನೆರವು ನೀಡುತ್ತಿದ್ದು, ನಾಲ್ಕು ತಿಂಗಳಿಗೊಮ್ಮೆ ₹2 ಸಾವಿರದಂತೆ ಮೂರು ಕಂತುಗಳಲ್ಲಿ ರೈತರ ಬ್ಯಾಂಕ್ ಖಾತೆಗೆ ವರ್ಗಾಯಿಸುತ್ತಿದೆ. ಫಲಾನುಭವಿಗಳ ಪಟ್ಟಿಯಲ್ಲಿ ಹೆಸರಿದೆ, ಇ-ಕೆವೈಸಿ ಮಾಡಿಸಿದ್ದೇನೆ. ಆದರೂ ಹಣ ಬಂದಿಲ್ಲ ಎಂದು ರೈತ ಸಹಾಯವಾಣಿಗೆ ನೂರಾರು ಕರೆಗಳು ಬರುತ್ತಿವೆ' ಕೃಷಿ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

'ಈ ಕರೆಗಳಿಗೆ ಸ್ಪಂದಿಸುವ ಕೇಂದ್ರದ ಸಿಬ್ಬಂದಿ ಅವರ ದಾಖಲೆಗಳನ್ನು ಪಡೆದು ಪರಿಶೀಲಿಸುತ್ತಾರೆ. ರೈತರ ಆಧಾರ್ ಕಾರ್ಡ್, ಜಮೀನಿನ ಪಹಣಿ, ಬ್ಯಾಂಕ್ ಖಾತೆಯಲ್ಲಿ ಇರುವ ಹೆಸರಿನ ಸ್ಪೆಲಿಂಗ್ ಒಂದೇ ರೀತಿ ಇರದಿದ್ದರೆ, ಬ್ಯಾಂಕ್ ಖಾತೆಗೆ ಆಧಾರ್ ಲಿಂಕ್ ಆಗದಿದ್ದರೆ, ಹಣ ಜಮೆ ಆಗುವುದಿಲ್ಲ. ಈ ದಾಖಲೆಗಳನ್ನು ಸರಿಪಡಿಸಿಕೊಳ್ಳುವಂತೆ ಸಲಹೆ ನೀಡಲಾಗುತ್ತದೆ' ಎಂದರು.

'ಬೆಳೆ ಸಮೀಕ್ಷೆ ಆ್ಯಪ್‌ನಲ್ಲಿ ಸರ್ವರ್ ಬ್ಯುಸಿ, ದತ್ತಾಂಶ ಅಪ್‌ಲೋಡ್ ಆಗದಿರುವುದು, ಜಿಪಿಎಸ್ ದೋಷಗಳು, ಹಿಸ್ಸಾ ಸಂಖ್ಯೆ ಗುರುತಿಸುವಿಕೆಯಲ್ಲಿ ಆಗುತ್ತಿರುವ ತೊಂದರೆಗಳು, ಬೆಳೆ ಸಮೀಕ್ಷೆ ಆ್ಯಪ್‌ನಲ್ಲಿ ಬೆಳೆ ವಿವರ ನಮೂದಿಸುವುದು ಹೇಗೆ ಎಂಬ ಕರೆಗಳು ಬರುತ್ತಿವೆ. ಕೇಂದ್ರದ ಸಿಬ್ಬಂದಿ ಇವುಗಳಿಗೆ ಪರಿಹಾರ ನೀಡುವ ಕೆಲಸ ಮಾಡುತ್ತಿದ್ದಾರೆ' ಎಂದು ವಿವರಿಸಿದರು.

ಮುಖ್ಯಾಂಶಗಳು

- ರೈತ ಕರೆ ಕೇಂದ್ರಕ್ಕೆ ಎಐ ತಂತ್ರಜ್ಞಾನ ಬಳಸುವ ಚಿಂತನೆ
- ನೂತನ ಡ್ಯಾಶ್‌ಬೋರ್ಡ್ ರೂಪಿಸಲು ಬಿಇಎಲ್‌ನೊಂದಿಗೆ ಒಪ್ಪಂದ
- ರೈತರ ಎಲ್ಲ ಸಮಸ್ಯೆಗಳಿಗೆ ಒಂದು ವೇದಿಕೆಯಡಿ ಪರಿಹಾರ

21 ಸಿಬ್ಬಂದಿ ನಿಯೋಜನೆ

ಈ ಕರೆ ಕೇಂದ್ರ ಬೆಳಿಗ್ಗೆ 8ರಿಂದ ಸಂಜೆ 7 ಗಂಟೆಯವರೆಗೆ ಕಾರ್ಯನಿರ್ವಹಿಸುತ್ತಿದ್ದು, ಇದರ ನಿರ್ವಹಣೆಗಾಗಿ ಒಟ್ಟು 21 ಸಿಬ್ಬಂದಿ ಇದ್ದಾರೆ. ನಿತ್ಯ ಸುಮಾರು 500ಕ್ಕೂ ಹೆಚ್ಚು ಕರೆಗಳು ಬರುತ್ತಿದ್ದು, ಇದರಲ್ಲಿ ಪಿಎಂ ಕಿಸಾನ್ ಸಮ್ಮಾನ್ ನಿಧಿಗೆ ಹಾಗೂ ಬೆಳೆ ಸಮೀಕ್ಷೆ ಕುರಿತು ಮಾಹಿತಿ ಕೋರಿ ಹೆಚ್ಚು ಕರೆಗಳು ಬರುತ್ತಿವೆ. ಬಹುತೇಕ ಪ್ರಶ್ನೆಗಳಿಗೆ ಉತ್ತರಿಸಲಾಗುತ್ತದೆ. ಇಲ್ಲದಿದ್ದರೆ ಸಂಬಂಧಪಟ್ಟ ವಿಭಾಗದವರಿಂದ ಮಾಹಿತಿ ಪಡೆದು ನೀಡಲಾಗುತ್ತದೆ' ಎಂದು ಕೃಷಿ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

ರೈತಕೇಂದ್ರದಲ್ಲಿ ಸ್ವೀಕೃತವಾದ ಕರೆಗಳ ವಿವರ

ವಿಭಾಗ	2023	2024	2025 ಹಾಗೂ 2026ರ ಫೆ.3ರವರೆಗೆ
ಬೆಳೆ ಸಮೀಕ್ಷೆ	24,275	42,755	48,515
ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ	30,693	43,329	51,584
ಬೆಳೆ ವಿಮೆ	2,569	8,198	8,959
ಮುಖ್ಯಮಂತ್ರಿ ರೈತ ವಿದ್ಯಾನಿಧಿ	4,999	4,009	640
ಇತರೆ ತಾಂತ್ರಿಕ ವಿಷಯ/ಯೋಜನೆಗಳು	2,247	11,493	5,287
ಸ್ವೀಕೃತವಾದ ಒಟ್ಟು ಕರೆಗಳ ಸಂಖ್ಯೆ	2,89,552		

'ದತ್ತಾಂಶ ಸಂಗ್ರಹಕ್ಕೆ ಪ್ರತ್ಯೇಕ ಡ್ಯಾಶ್‌ಬೋರ್ಡ್'

'ಕರೆಗಳ ದತ್ತಾಂಶ ಸಂಗ್ರಹಿಸಲು ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದೊಂದಿಗೆ ರೈತ ಕರೆ ಕೇಂದ್ರವನ್ನು ಉನ್ನತೀಕರಿಸುವ ಚಿಂತನೆ ಇದೆ. ಈ ಕರೆಗಳ ದತ್ತಾಂಶಗಳನ್ನು ಸಂಗ್ರಹಿಸುವ ಡ್ಯಾಶ್‌ಬೋರ್ಡ್ ರೂಪಿಸುವುದಕ್ಕೆ ಭಾರತ್ ಎಲೆಕ್ಟ್ರಾನಿಕ್ ಲಿಮಿಟೆಡ್ (ಬಿಇಎಲ್) ಜೊತೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ' ಎಂದು ಎಂದು ಕೃಷಿ ಇಲಾಖೆಯ ನಿರ್ದೇಶಕ ಜಿ.ಟಿ. ಪುತ್ರ 'ಪ್ರಜಾವಾಣಿ'ಗೆ ತಿಳಿಸಿದರು.



ಜಿ.ಟಿ. ಪುತ್ರ



ರೈತ ಕರೆ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ

ಪ್ರಜಾವಾಣಿ ಚಿತ್ರ: ಎಂ.ಎಸ್. ಮಂಜುನಾಥ್

ಪ್ರೇಮಿಗಳ ದಿನಕ್ಕೆ ಗುಲಾಬಿ ದರ ಏರಿಕೆ

ಬೆಂಗಳೂರು : ಪ್ರೇಮಿಗಳ ದಿನಕ್ಕಾಗಿ ಕೆಂಪು ಗುಲಾಬಿಗಳಿಗೆ ಹೆಚ್ಚು ಬೇಡಿಕೆಯಿದೆ. ಜತೆಗೆ, ತಿಳಿ ಗುಲಾಬಿ, ಹಳದಿ, ಬಿಳಿ-ಕೆಂಪು ದ್ವಿವರ್ಣದ ಗುಲಾಬಿ, ಬಿಳಿ ಗುಲಾಬಿಗಳಿಗೆ ಎಲ್ಲಿಲ್ಲದ ಬೇಡಿಕೆ ಬಂದಿದೆ. ಸುಮಾರು ಒಂದು ವಾರ ತಾಜಾ ಆಗಿರುವ ಪಾಲಿಹೌಸ್‌ಗಳಲ್ಲಿ ಬೆಳೆದ ಡಚ್ ಈ ಗುಲಾಬಿಗಳ ಬೆಲೆಯೂ ದುಬಾರಿಯಾಗಿದೆ.



10 ಸಾವಿರದ ಹೂಗುಚ್ಛ (ಬೊಕೆ)ಗಳು

ಬಿಡಿ ಗುಲಾಬಿಗಳು ಮಾತ್ರವಲ್ಲದೆ ಕೆಲವರು ಗುಲಾಬಿ ಹಾಗೂ ಇತರೆ ಹೂವುಗಳ ಮಿಶ್ರಿತ ಹೂಗುಚ್ಛ (ಬೊಕೆ)ಗಳನ್ನು ಖರೀದಿಸುತ್ತಾರೆ. ಬೊಕೆಗೆ ಬಳಸುವ ಹೂವು ಜೆಪ್ಸೊಫಿಲಿಯಾ (ಒಂದು ಬಂಚ್ 200 ರೂ.), ಸ್ನ್ಯಾಪ್‌ಡ್ರಾಗನ್ಸ್-25-30 ರೂ. , ಸಿಲೋಸಿಯಾ-40 ರೂ., ಹೈಡ್ರೋಂಜಿಯಾ-250 ರೂ. (ಕಟ್ ಫ್ಲವರ್), ಕ್ರಿಸಾಂತಿಮಮ್-20 ರೂ. ಇವೆಲ್ಲವನ್ನೂ ಗುಲಾಬಿಗಳ ಜತೆಗೆ ಸೇರಿಸಿ ತಯಾರಿಸುವ ಹೂಗುಚ್ಛ ಒಂದು ಸಾವಿರ ರೂ.ಗಳಿಂದ ಆರಂಭವಾಗಿ 10 ಸಾವಿರ ರೂ. ಹಾಗೂ ಮೇಲ್ಪಟ್ಟು ದರವಿದೆ ಎನ್ನುತ್ತಾರೆ ಐಫ್ಲಾಬ್‌ನ ನಿರ್ದೇಶಕ ಶ್ರೀಕಾಂತ್ ಬೊಲ್ಲೆಪಲ್ಲಿ.

ಗುಲಾಬಿ ಹೂಗಳ ವಿಧ ಮತ್ತು ದರ

ಹೂವಿನ ವಿಧಗಳು	ಸಗಟು ದರ ಹೆಚ್ಚಾದ ಐಫ್ಲಾಬ್	ಚಿಲ್ಲರೆ ದರ
ತಾಜ್‌ಮಹಲ್ ರೆಡ್	0-35 ರೂ.	50-80 ರೂ.
ರಿವೈವಲ್ (ಪಿಂಕ್)	20-25 ರೂ.	50-60 ರೂ.
ಗೋಲ್ಡ್ ಸ್ಟ್ರೈಕ್ (ಹಳದಿ)	20 ರೂ.	50 ರೂ.
ಜುಮೇಲಿಯಾ (ಕೆಂಪು,ಪಿಂಕ್ ಮಿಶ್ರಿತ)	20-25 ರೂ.	60-70 ರೂ.
ಅವಲಾಂಚೊ (ವೈಟ್)	15-20	(ಬಿಳಿ) 50 ರೂ.

ಪ್ರದೇಶಕ್ಕೆ ತಕ್ಕಂತೆ ಚಿಲ್ಲರೆ ದರದಲ್ಲಿ ಏರುಪೇರಾಗುತ್ತದೆ.

V-karanaataka Pg 11

ಅಡಕೆ ಧಾರಣೆ ಏರಿಕೆ ಮತ್ತಷ್ಟು ಹೆಚ್ಚಳ ಸಾಧ್ಯತೆ

ಪುತ್ತೂರು: ಮಾರುಕಟ್ಟೆಗೆ ನಿರೀಕ್ಷಿತ ಪ್ರಮಾಣದಲ್ಲಿ ಅಡಕೆ ಪೂರೈಕೆಯಾಗದ ಕಾರಣ ಎರಡು ದಿನದಿಂದ ಧಾರಣೆ ಏರಿಕೆಯಾಗುತ್ತಿದೆ. ಹೊಸ ಅಡಕೆ ಕೆಜಿಗೆ 20 ರೂ., ಹಳೇ ಅಡಕೆ ಹಾಗೂ ಡಬ್ಬಲ್ ಚೋಲ್‌ಗೆ 15 ರೂ. ಹೆಚ್ಚಳವಾಗಿದೆ. ಬಿಸಿಲಿನ ತೀವ್ರತೆಗೆ ಎಳೆ ಅಡಕೆಗೆ ಹಾನಿಯಾಗಿರುವುದಲ್ಲದೆ, ಎಲೆಚುಕ್ಕಿ, ಹಳದಿ ಎಲೆ, ಕೊಳೆರೋಗಗಳಿಂದ ಈ ಬಾರಿ ಇಳುವರಿ ಗಣನೀಯ ಪ್ರಮಾಣದಲ್ಲಿ ಕುಂಠಿತವಾಗಿದೆ. ಕರಾವಳಿಯ ಸಹಕಾರಿ ಸಂಸ್ಥೆಗಳಿಗೆ ಹೋಲಿಸಿದರೆ, ಸ್ಥಳೀಯ ಮುಕ್ತಮಾರುಕಟ್ಟೆ ಧಾರಣೆ ಕೆಜಿಗೆ 10 ರೂ. ಹೆಚ್ಚಾಗಿದೆ. ಉತ್ತರ ಭಾರತದಲ್ಲಿ ಅಡಕೆಗೆ ಬೇಡಿಕೆ ಹೆಚ್ಚಿರುವುದರಿಂದ ಬೆಲೆ ಇನ್ನಷ್ಟು ಏರಿಕೆಯಾಗುವ ಸಾಧ್ಯತೆ ಇದೆ.



ಕೆಜಿ ಅಡಕೆಗೆ ದರ ಎಷ್ಟಿದೆ?: ಕಳೆದ ಎರಡು ದಿನದಲ್ಲಿ ಹೊಸ ಅಡಕೆ ಕೆಜಿಗೆ 460 ರೂ.ನಿಂದ 480 ರೂ.ಗೆ ಏರಿಕೆಯಾಗಿದೆ. ಹಳೇ ಅಡಕೆ ಹಾಗೂ ಡಬ್ಬಲ್ ಚೋಲ್ 535 ರೂ.ನಿಂದ 550 ರೂ. ತಲುಪಿದೆ. ಕರಾವಳಿ ಸ್ಥಳೀಯ ಮುಕ್ತಮಾರುಕಟ್ಟೆಯಲ್ಲಿ ಹೊಸ ಅಡಕೆ ಧಾರಣೆ 490 ರೂ. ತಲುಪಿದರೆ, ಹಳೇ ಅಡಕೆ ಹಾಗೂ ಡಬ್ಬಲ್‌ಚೋಲ್ 560 ರೂ.ಗೆ ಏರಿಕೆಯಾಗಿದೆ. ಕಾಳುಮೆಣಸು ಕೆಜಿಗೆ 15 ರೂ. ಏರಿಕೆ ಕಂಡು 700 ರೂ. ತಲುಪಿದೆ.

Vijajavani Pg 09

ಮನೆಯಲ್ಲೇ ಅರಿಶಿನ ಬೆಳೆಸಿ

V-karanaataka Pg 09

ಮನೆಯಲ್ಲಿಯೇ ತಾಜಾ ಹಾಗೂ ರಾಸಾಯನಿಕ ಮುಕ್ತ ಅರಿಶಿನವನ್ನು ಪಡೆಯಲು, ಕೆಲ ಮಾರ್ಗಗಳನ್ನು ಅನುಸರಿಸುವ ಮೂಲಕ ಬಾಲ್ಕನಿ ತೋಟದಲ್ಲಿ, ಕುಂಡಗಳಲ್ಲಿ ಸುಲಭವಾಗಿ ಬೆಳೆಸಬಹುದು.



- ಕನಿಷ್ಠ 30 ಸೆಂ.ಮೀ ಆಳ ಮತ್ತು ಅಗಲವಿರುವ, ಕೆಳಭಾಗದಲ್ಲಿ ಉತ್ತಮ ರಂಧ್ರಗಳಿರುವ ಪಾಟ್ ಆರಿಸಿ. ಜೇಡಿಮಣ್ಣು ಟೆರಾಕೋಟಾ ಅಥವಾ ರಂಧ್ರಗಳನ್ನು ಹೊಂದಿರುವ ಭಾರವಾದ ಪ್ಲಾಸ್ಟಿಕ್ ಪಾಟ್‌ಗಳು ಸೂಕ್ತ.
- ನೀರು ಬರಿದಾಗುವ ಮತ್ತು ಪೌಷ್ಟಿಕ ಮಣ್ಣಿನ ಮಿಶ್ರಣದಿಂದ ಪಾಟ್ ಅನ್ನು ತುಂಬಿಸಿ. ಉತ್ತಮ ಗುಣಮಟ್ಟದ ಮಣ್ಣು, ಕಾಂಪೋಸ್ಟ್ ಮತ್ತು ಕೊಕೊಪೀಟ್ ಅಥವಾ ಮರಳಿನ ಮಿಶ್ರಣವು ಸೂಕ್ತ. ಅರಿಶಿನವು ತೇವಾಂಶವುಳ್ಳ ಆದರೆ ನೀರು ನಿಲ್ಲದ ಮಣ್ಣಿನಲ್ಲಿ ಉತ್ತಮವಾಗಿ ಬೆಳೆಯುತ್ತದೆ. ನೀರು ನಿಲ್ಲುವ ಮಣ್ಣಿನಲ್ಲಿ ಬೇರು ಕೊಳೆಯುವ ಸಾಧ್ಯತೆ ಹೆಚ್ಚು.
- ತಾಜಾ ಬೇರುಕಾಂಡಗಳನ್ನು ಸುಮಾರು 5ರಿಂದ 7 ಸೆಂ.ಮೀ ಆಳಕ್ಕೆ ನೆಡಿ. ನಂತರ ಮಣ್ಣಿನಿಂದ ಲಘುವಾಗಿ ಮುಚ್ಚಿ
- ಇದು 20ರಿಂದ 35 ಡಿಗ್ರಿ ಸೆಲ್ಸಿಯಸ್ ತಾಪಮಾನವನ್ನು ಮತ್ತು ಸಾಕಷ್ಟು ಪ್ರಕಾಶಮಾನವಾದ, ಪರೋಕ್ಷ ಬೆಳಕನ್ನು ಬಯಸುತ್ತದೆ. ಬೆಳಿಗಿನ ಸೂರ್ಯನ ಬೆಳಕು ಬೀಳುವ ಸ್ಥಳದಲ್ಲಿ ಗಿಡಗಳನ್ನು ಇರಿಸಿ.
- ಮಣ್ಣನ್ನು ತೇವವಾಗಿರಿಸಿಕೊಳ್ಳಿ, ಆದರೆ ನೀರು ನಿಲ್ಲದಂತೆ ನೋಡಿಕೊಳ್ಳಿ, ಮೇಲಿನ ಮಣ್ಣಿನ ಪದರವು ಸ್ವಲ್ಪ ಒಣಗಿದ್ದರೆ ನೀರನ್ನು ಸೇರಿಸಿ.
- ಬೆಳೆಯುವ ಋತುವಿನಲ್ಲಿ ಕೆಲವು ವಾರಗಳಿಗೊಮ್ಮೆ ಸಮತೋಲಿತ ಸಾವಯವ ಅಥವಾ ಕಾಂಪೋಸ್ಟ್ ಗೊಬ್ಬರ ಹಾಕಿ. ಹಳದಿ ಬಣ್ಣದ ಎಲೆಗಳನ್ನು ತೆಗೆದುಹಾಕಿ.
- ಅರಿಶಿನ ಸಸ್ಯಗಳು ಪೂರ್ಣ ಪಕ್ವತೆಗೆ ಬರಲು ಸರಾಸರಿ 8ರಿಂದ 10 ತಿಂಗಳು ಬೇಕು. ಅದು ಸಿದ್ಧವಾದ ನಂತರ, ಅದರ ಎಲೆಗಳು ಹಳದಿ ಬಣ್ಣಕ್ಕೆ ತಿರುಗಿ ಸತ್ತಾಗ ಅರಿಶಿನವನ್ನು ಕೊಯ್ಲು ಮಾಡಬಹುದು. ಅರಿಶಿನ ಬೇರುಗಳನ್ನು ಎಚ್ಚರಿಕೆಯಿಂದ ಅಗೆದು, ಅವುಗಳನ್ನು ತೊಳೆದು ಬಳಸಬಹುದು.

ಪರಿಷ್ಕೃತ ಪಟ್ಟಿಯಿಂದ ಪಲ್ಸ್ ಕೈಬಿಟ್ಟ ಶ್ವೇತ ಭವನ
ರಫ್ತಿನಿಂದ ಬೇಳೆ ಕಾಳು ಹೊರಕ್ಕೆ

ಹೊಸದಿಲ್ಲಿ: ಭಾರತ – ಅಮೆರಿಕ ನಡುವಿನ ಐತಿಹಾಸಿಕ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದ ಪರಿಷ್ಕೃತ ಪಟ್ಟಿಯಲ್ಲಿ ಶ್ವೇತಭವನ ಮಹತ್ವದ ತಿದ್ದುಪಡಿಗಳನ್ನು ಮಾಡಿದ್ದು, ಕೆಲವು ಬೇಳೆಗಳ ಮೇಲಿನ ಸುಂಕ ಕಡಿತ ಉಲ್ಲೇಖವನ್ನು ಕೈಬಿಟ್ಟಿದೆ. ಕೃಷಿ ಆಮದು ಭಾರತದ ರೈತ ಸಮುದಾಯಕ್ಕೆ ಅತೀ ಸಂವೇದನಾಶೀಲ ವಿಷಯವಾಗಿರುವ ಹಿನ್ನೆಲೆಯಲ್ಲಿ ಈ ಬದಲಾವಣೆ ಚರ್ಚೆಗೆ ಗ್ರಾಸವಾಗಿದೆ.

ಮಂಗಳವಾರ ಬಿಡುಗಡೆಗೊಂಡ ಮೊದಲ ಆವೃತ್ತಿಯ ಪರಿಷ್ಕೃತ ಪತ್ರದಲ್ಲಿ, ಅಮೆರಿಕದ ಕೈಗಾರಿಕಾ ವಸ್ತುಗಳು ಹಾಗೂ ಆಹಾರ ಕೃಷಿ ಉತ್ಪನ್ನಗಳ ವಿಶಾಲ ಪಟ್ಟಿಯ ಮೇಲಿನ ಸುಂಕಗಳನ್ನು ಭಾರತ ರದ್ದುಪಡಿಸಲಿದೆ ಅಥವಾ ಕಡಿತಗೊಳಿಸಲಿದೆ ಎಂದು ಹೇಳಲಾಗಿತ್ತು. ಆ ಪಟ್ಟಿಯಲ್ಲಿ ಒಣ ಡಿಸ್ಟಿಲರ್ಸ್ ಗ್ರೇನ್, ರೆಡ್ ಸೊರ್ಗಮ್, ಟ್ರೀ ನಟ್ಸ್, ತಾಜಾ ಮತ್ತು ಸಂಸ್ಕರಿತ ಹಣ್ಣುಗಳು, ಕೆಲವು ಬೇಳೆಗಳು, ಸೋಯಾಬೀನ್ ಎಣ್ಣೆ, ವೈನ್ ಮತ್ತು ಸ್ಪಿರಿಟ್ಸ್ ಸೇರಿದಂತೆ ಹಲವು ಉತ್ಪನ್ನಗಳು ಸೇರಿದ್ದವು.

ಆದರೆ, ನವೀಕರಿಸಿದ ಪಟ್ಟಿಯಲ್ಲಿ ಬೇಳೆಗಳು ಎಂಬ ಪದವನ್ನೇ ತೆಗೆದುಹಾಕಿ, ಉಳಿದ ಉತ್ಪನ್ನಗಳ ಪಟ್ಟಿಯನ್ನು ಮಾತ್ರ ಉಳಿಸಲಾಗಿದೆ. ಈ ತಿದ್ದುಪಡಿ ಕೃಷಿ ವಲಯದ ದೃಷ್ಟಿಯಿಂದ ಗಮನಾರ್ಹವೆಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಭಾರತವು ಲೆಂಟಿಲ್ಸ್, ಕಡಲೆ, ಒಣ ಬೀನ್ಸ್ ಸೇರಿದಂತೆ ಬೇಳೆಕಾಳುಗಳ ವಿಶ್ವದ ಅತಿದೊಡ್ಡ ಉತ್ಪಾದಕ ಹಾಗೂ ಬಳಕೆದಾರ ದೇಶವಾಗಿದೆ. ದೇಶೀಯ ರೈತರ ಹಿತಾಸಕ್ತಿಯನ್ನು ರಕ್ಷಿಸಲು ಈ ವರ್ಗದ ಆಮದುಗಳ ಮೇಲೆ ಭಾರತ ಉನ್ನತ ಸುಂಕಗಳನ್ನು ವಿಧಿಸಿದೆ. ಈ ಹಿನ್ನೆಲೆ, ಬೇಳೆಗಳ ಸುಂಕ ಕಡಿತದ ಸಾಧ್ಯತೆ ಕುರಿತು ಮೂಡಿದ್ದ ಆತಂಕಗಳಿಗೆ ಶ್ವೇತಭವನದ ತಿದ್ದುಪಡಿ ಅರ್ಥಪೂರ್ಣವೆಂದು ಹೇಳಲಾಗುತ್ತಿದೆ.

ಮೊದಲ ಆವೃತ್ತಿಯಲ್ಲಿ ಭಾರತವು ಡಿಜಿಟಲ್ ಸೇವೆಗಳ ತೆರಿಗೆಯನ್ನು ತೆಗೆದುಹಾಕಲಿದೆ ಎಂಬ ಸ್ಪಷ್ಟ ಉಲ್ಲೇಖವಿತ್ತು. ಜೊತೆಗೆ, ಡಿಜಿಟಲ್ ವ್ಯಾಪಾರಕ್ಕೆ ಅಡ್ಡಿಯಾಗುವ ಕ್ರಮಗಳನ್ನು ಪರಿಹರಿಸಲು ದ್ವಿಪಕ್ಷೀಯ ನಿಯಮಗಳನ್ನು ಚರ್ಚಿಸಲು ಭಾರತ ಬದ್ಧವಾಗಿದೆ ಎಂದು ಹೇಳಲಾಗಿತ್ತು. ಆದರೆ, ತಿದ್ದುಪಡಿ ಮಾಡಿದ ಪತ್ರದಲ್ಲಿ ಡಿಜಿಟಲ್ ಸೇವೆಗಳ ತೆರಿಗೆ ರದ್ದುಪಡಿಸುವ ಕುರಿತು ಯಾವುದೇ ಉಲ್ಲೇಖ ಇಲ್ಲ. ಇದೀಗ, ಡಿಜಿಟಲ್ ವ್ಯಾಪಾರ ಅಡೆತಡೆಗಳನ್ನು ಪರಿಹರಿಸುವ ಉದ್ದೇಶದಿಂದ ದ್ವಿಪಕ್ಷೀಯ ನಿಯಮಗಳನ್ನು ಚರ್ಚಿಸಲು ಭಾರತ ಬದ್ಧವಾಗಿದೆ ಎಂದು ಮಾತ್ರ ಹೇಳಲಾಗಿದೆ.

Vijajavani Pg 09

ಬಟರ್‌ಫ್ರೂಟ್, ಮಕಾಡಾಮಿಯಾ ಹಣ್ಣುಗಳ ಕುರಿತು ವಿಚಾರ ಸಂಕಿರಣ
ಹೊಸ ಹಣ್ಣಿನ ಬೆಳೆ ಆರ್ಥಿಕ ಸದೃಢತೆಗೆ ಸಹಕಾರಿ

ದೇವನಹಳ್ಳಿ: ಅಪರೂಪದ ವಾಣಿಜ್ಯ ಬೆಳೆಗಳಾದ ಬಟರ್‌ಫ್ರೂಟ್ ಮತ್ತು ಮಕಾಡಾಮಿಯಾ ಬೆಳೆಗಳನ್ನು ಬೆಳೆದು ಆರ್ಥಿಕವಾಗಿ ಸದೃಢವಾಗಿ ಎಂದು ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರದ ಕಾರಂತ್ ತಿಳಿಸಿದರು.



ಅವರು ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಮತ್ತು ಜಿಲ್ಲಾ ತೋಟಗಾರಿಕಾ ಇಲಾಖೆ ವತಿಯಿಂದ ಅಣ್ಣೇಶ್ವರ ಗ್ರಾ.ಪಂ. ಸಭಾಂಗಣದಲ್ಲಿ ನಡೆದ ಜಿಲ್ಲೆಯ ನಾಲ್ಕು ತಾಲೂಕು ರೈತರಿಗೆ ಬಟರ್‌ಫ್ರೂಟ್ ಮತ್ತು ಮಕಾಡಾಮಿಯಾ ಬೆಳೆಗಳ ಬಗ್ಗೆ ವಿಚಾರ ಸಂಕಿರಣದಲ್ಲಿ ಮಾತನಾಡಿ, ಬಟರ್‌ಫ್ರೂಟ್ ಅನ್ನು ಕನ್ನಡದಲ್ಲಿ ಬೆಣ್ಣೆ ಹಣ್ಣು ಎಂದು ಕರೆಯುತ್ತಾರೆ. ಇದನ್ನು ಇಂಗ್ಲಿಷ್‌ನಲ್ಲಿ ಅಡಟ್ಟಚಟಫ (ಅವಕಾಡೊ) ಎಂದು ಕರೆಯಲಾಗುತ್ತದೆ. ಇದು ವಿಟಮಿನ್ ಎ, ಇ, ಉ, ಪ್ರೋಟೀನ್, ಫೈಬರ್ ಮತ್ತು ಆರೋಗ್ಯಕರ ಕೊಬ್ಬಿನಂಶದಿಂದ ಸಮೃದ್ಧವಾಗಿದೆ, ಇದನ್ನು ಸಾಮಾನ್ಯವಾಗಿ ಮಿಲ್ಕ್ ಶೇಕ್ ಮಾಡಿ ಕುಡಿಯಲಾಗುತ್ತದೆ.

ಬೆಣ್ಣೆ ಹಣ್ಣಿನ (Butter Fruit) ಪ್ರಮುಖ ಪ್ರಯೋಜನಗಳೆಂದರೆ ಹೃದಯದ ಆರೋಗ್ಯ ದೇಹದಲ್ಲಿನ ಕೆಟ್ಟ ಕೊಲೆಸ್ಟ್ರಾಲ್ ಅನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಪೌಷ್ಟಿಕಾಂಶ ಇದರಲ್ಲಿ ಬಾಳೆಹಣ್ಣಿಗಿಂತ 60% ಹೆಚ್ಚು ಪೊಟ್ಯಾಸಿಯಮ್ ಇದೆ, ತ್ವಚೆ ಆರೈಕೆ, ಇದರ ತೈಲವು ಚರ್ಮವನ್ನು ಮೃದುಗೊಳಿಸುತ್ತದೆ, ತೂಕ ನಿರ್ವಹಣೆ: ಇದರಲ್ಲಿನ ಆರೋಗ್ಯಕರ ಕೊಬ್ಬು ಮತ್ತು ಕಾರ್ಬೋಹೈಡ್ರೇಟ್ ದೇಹಕ್ಕೆ ಶಕ್ತಿ ನೀಡುತ್ತದೆ, ಗರ್ಭಿಣಿಯರಿಗೆ ಉತ್ತಮ, ಫೋಲೇಟ್ ಅಂಶ ಹೆಚ್ಚಿರುವುದರಿಂದ ಗರ್ಭಿಣಿಯರಿಗೆ ತುಂಬಾ ಪ್ರಯೋಜನಕಾರಿ. ಕರ್ನಾಟಕ, ಕೇರಳ ಮತ್ತು ತಮಿಳುನಾಡಿನಲ್ಲಿ ಈ ಹಣ್ಣನ್ನು ವ್ಯಾಪಕವಾಗಿ ಬೆಳೆಯಲಾಗುತ್ತದೆ. ಮಕಾಡಾಮಿಯಾ ಹಣ್ಣು ಕಾಯಿ ಅಥವಾ ಬೀಜ ಎಂದು ಕರೆಯಲಾಗುತ್ತದೆ. ಇದು ಆಸ್ಟ್ರೇಲಿಯಾದ ಮೂಲದ, ದಪ್ಪನೆಯ ಸಿಪ್ಪೆಯುಳ್ಳ, ಆರೋಗ್ಯಕರ ಕೊಬ್ಬಿನಂಶ ಹೊಂದಿರುವ ಅತ್ಯಂತ ದುಬಾರಿ ಮತ್ತು ಪೌಷ್ಟಿಕ ಡ್ರೈಫ್ರೂಟ್ ಆಗಿದೆ. ಇದನ್ನು ಕ್ವೀನ್ಸ್‌ಲ್ಯಾಂಡ್ ನಟ್ ಎಂದೂ ಕರೆಯುತ್ತಾರೆ.

ಅಣ್ಣೇಶ್ವರ ಗ್ರಾ.ಪಂ.ನ ಬೂವನಹಳ್ಳಿ ಮುನಿರಾಜು, ಅಣ್ಣೇಶ್ವರ ಮುನಿ ರಾಜು(ದಿಲ್ರಾಜ್) ತೋಟಗಾರಿಕಾ ಜೆ.ಗುಣವಂತ, ಸಹಾಯಕ ನಿರ್ದೇಶಕಿ ಉಮಾಪತಿ, ಮಲ್ಲಿಕಾರ್ಜುನ ಬಾಬು, ದೀಪಾ(ಹೊಸಕೋಟೆ) ಹರೀಶ್, ಆದರ್ಶ, ಅನುರಾಗ ಗೌಡ, ಕಾಂತರಾಜ್, ರಾಜೇಂದ್ರ, ಕೋಕಿಲ, ಅರ್ಚನಾ, ಮಹಾಲಕ್ಷ್ಮಿ, ಪವಿತ್ರ, ಬೀರೇಶ್, ಶಶಿ, ಮನೋಜ್, ರಾಕೇಶ್, ವೆಂಕಟೇಶ್ ಸೇರಿದಂತೆ ನಾಲ್ಕು ತಾಲೂಕಿನ ಪ್ರಗತಿಪರ ರೈತರು ಭಾಗವಹಿಸಿದ್ದರು.

Hosadiganta Pg 10